ಶ್ರೀ ಟಿ. ಎಚ್. ಮೂಡಲಗಿರಿಗೌಡ.— ಜಿಲ್ಲಾ ಬೋರ್ಡ್ ರಸ್ತೆಗಳಲ್ಲಿ ಮೋಟಾರು ವಾಹನಗಳು ತಿರುಗಾಡುವುದಕ್ಕೆ ಜಿಲ್ಲಾ ಬೋರ್ಡ್ ಅಧ್ಯಕ್ಷರು ಅನುಮತಿ ಕೊಟ್ಟಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿರುತ್ತಾರೆಂದು ಭಾವನೆ.

ಶ್ರೀ ಬಿ. ರಾಚಯ್ಯ —ಜಹಗೀರಿಗಳಲ್ಲೇನಾದರೂ ಈರೀತಿ ಕ್ಲಾಸಿಫಿಕೇಷ್ ಮಾಡಿದ್ದೀರಾ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು.

ಶ್ರೀ ಬಿ. ರಾಚಯ್ಯ.—ಯಳಂದೂರು ತಾಲ್ಲೂಕಿನಲ್ಲೇನಾದರೂ ಈ ರೀತಿ ಮಾಡಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇ ನೋಟೀಸ್ ಬೇಕೆಂದು ಹೇಳಿದ್ದು.

ಶ್ರೀ ಆರ್. ಅನಂತರಾಮ್.—ಕನಕಪುರದ ರಸ್ತೆ ಯಾವ ತರಗತಿಗೆ ಸೇರುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಆರ್. ಅನಂತರಾಮ್.—ತಾವು ಆ ರಸ್ತೆಯಲ್ಲೇನಾದರೂ ಹೋಗಿದ್ದೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದುವರೆಗೆ ಹೋಗಿಲ್ಲ.

ಶ್ರೀ ಬಿ. ಚಿಕ್ಕಣ್ಣ.—ಜಿಲ್ಲಾ ಬೋರ್ಡ್ ರಸ್ತೆಗಳು ರಿಪೇರಿಯಾಗಿವೆಯೇ ಇಲ್ಲವೇ ಎಂದು check ಮಾಡುವವರು ಯಾರು ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರೆಸಿಡೆಂಟರು ಮತ್ತು ವೈಸ್ ಪ್ರೆಸಿಡೆಂಟರು.

ಶ್ರೀ ಬಿ. ಚಿಕ್ಕಣ್ಣ.—ಕೆಲವು ಜಿಲ್ಲಾ ಬೋರ್ಡುಗಳಲ್ಲಿ ರಸ್ತೆಗಳು ಈರೀತಿ ರಿಪೇರಿಯಾಗದಿದ್ದರೂ ಆಬಗ್ಗೆ ಹಣ ಖರ್ಚು ಹಾಕಿಸಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಗಮನಕ್ಕೆ ಬಂದಿಲ್ಲ. ಅಂಥವಿದ್ದರೆ ನಮ್ಮ ಗಮನಕ್ಕೆ ತಂದರೆ ಪಾಸಿ.

ಶ್ರೀ ಬಿ. ಹುಚ್ಚೇಗೌಡ.—ಹೊಸದಾಗಿ ಬಸ್ ಲೈನುಗಳನ್ನು ಕೊಡಬೇಕಾದರೆ ಜಿಲ್ಲಾ ಬೋರ್ಡ್ ರಸ್ತೆಗಳ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಅನುಮತಿಯನ್ನು ಅಧಿಕಾರಯುತವಾಗಿ ತೆಗೆದುಕೊಂಡು ನಂತರ ಬಸ್‌ಲೈಸೆನ್ಸ್ ಕೊಡಬೇಕೆಂದು insist ಮಾಡುತ್ತೀರಾ ?

Sri Kadidal MANJAPPA,—We shall consider the suggestion.

ಶ್ರೀ ವೈ. ಎಂ. ಚೆಂದ್ರಶೇಖರಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರಿಗೆ 12½% ರವೆನ್ಯೂ ಹುಟ್ಟುವಳಿ ಕೊಡಬೇಕೆಂದಿದೆಯಲ್ಲ, ಅದರಂತೆ ಕೊಡುತ್ತಿದ್ದೀರಾ !

ಶ್ರೀ ಕಡಿದಾಳ್ ಮಂಜಪ್ಪ.—ಈ ವರ್ಷದ ಬಡ್ಜೆಟ್ಟಿನಲ್ಲಿ provision ಮಾಡಲಾಗಿದೆ.

Restoration of Hosakere in Inam Venkatapura.

Q.—464. **Sri C. T. HANUMANTHAIYA** (Pavagada–Scheduled Castes.)—

Will the Government be pleased to state :—

(*a*) how many years back Hosakere (Doddakere) situated in the above Inam Venkatapura in Pavagada Taluk breached ;

(*b*) whether it is a fact that the local raiyats petitioned the Government for getting the tank restored ;

(*c*) whether the concerned officers have gone there and prepared an estimate for this ;

(*d*) if so, the reason for not starting the work till now ;

(*e*) whether it has come to their notice that the raiyats have been put to lot of trouble as a result of this ?

A.—**Sri Kadidal MANJAPPA** (Minister for Revenue and Public Works).—

(*a*) There is no tank by that name.

(*b*) to (*e*) This does not arise in view of reply to (*a*) above.

ಶ್ರೀ ಸಿ. ಟಿ. ಹನುಮಂತಯ್ಯ.—ವೆಂಕಟಾಪುರದಲ್ಲಿ ಕೆರೆಯಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಹೇಳುವ ಕೆರೆಯಲ್ಲ.

ಶ್ರೀ ಸಿ. ಟಿ ಹನುಮಂತಯ್ಯ.—ಇನ್ನಾವ ಕೆರೆ ಇದೆ ?

Mr. SPEAKER.—That does not arise.

Restoration of Malagur tank, Krishnarajpet Taluk.

Q.—499. **Sri S. M. LINGAPPA** (Krishnarajpet).—

Will the Government be pleased to state :—

(*a*) whether the villagers of Malagur in Santhebachalli Hobli in Krishnarajpet Taluk have made representations to restore the tank of Malagur Village ;

(*b*) the steps taken by the Government in this behalf ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Government have sanctioned an estimate amounting to Rs. 2,75,000 for increasing the capacity of Malagur Tank. About 30 per cent of the work is done. Further work is held up as the question of compensation in respect

of submergeable lands is under examination.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ಅಂದಾಜು ಸರ್ಕಾರದಿಂದ ಮಂಜೂರಾದದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ಹಿಂಭಾಗದಲ್ಲಿರುವ ಅಚ್ಚುಕಟ್ಟೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ನೋಟೀಸ್ ಬೇಕು.

ಶ್ರೀ ಎಸ್. ಎಂ. ಲಿಂಗಪ್ಪ.—ಮುಳುಗಡೆಯಾಗತಕ್ಕ ಜಮೀನಿಗೆ ಕೊಡತಕ್ಕ ಪರಿಹಾರ ಸಾಮಾನ್ಯವಾಗಿ ಮೂಲ ಅಂದಾಜಿನಲ್ಲಿ ಸೇರಿರುತ್ತದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಸೇರಿರುತ್ತದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಹಾಗಿದ್ದ ಪಕ್ಷದಲ್ಲಿ ಅಂದಾಜು ಮಂಜೂರಾದಮೇಲೆ ರೈತರಿಗೆ ಕೊಡತಕ್ಕ ಪರಿಹಾರ ಆಲೋಚನೆಯಲ್ಲಿದೆ ಎಂದು ಹೇಳುತ್ತೀರಿ ಉತ್ತರದಲ್ಲಿ, ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಅಕ್ಸೆಪ್ಟಿಷನ್ನಿಗೆ ತಕರಾರು ಮಾಡುತ್ತಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಹೀಗೆ ಕೆಲಸ ಪ್ರಾರಂಭ ಮಾಡಿದಮೇಲೆ ಈ ರೀತಿ ಅಡಚಣೆ ಬರುವುದಕ್ಕೆ ಕಾರಣ ಹೇಳಿದ್ದೀರಿ, ಏಕೆ ಈ ರೀತಿ ಆಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿ.—ಮುಂದಾಲೋಚನೆ ಇಲ್ಲದಿದ್ದುದರಿಂದಲ್ಲವೆ ಹೀಗಾದದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಇದು ಈ ವರ್ಷ ಮಾಡಿದ್ದಲ್ಲ, ಕೆಲವು ವರ್ಷಗಳ ಹಿಂದೆ ಮಾಡಿದ್ದು. ಆಗಿನ ಸಂದರ್ಭವೇನಿತ್ತೋ ಹೇಳಲಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಶೇಕಡ 30 ಎಂದಿದೆ, ಇದಕ್ಕೆ ಎಷ್ಟು ಹಣ ಖರ್ಚಾಗಿದೆ ?

ಶ್ರೀ ಕಡಿದಾಳ್ ಮಂಜಪ್ಪ.—90,961 ರೂಪಾಯಿಗಳು.

ಶ್ರೀ ಕೆ. ಪುಟ್ಟಸ್ವಾಮಿ.—ಆ ಹಣ ನಿರರ್ಥಕವಾಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪುನಃ ಪ್ರಾರಂಭಮಾಡಬೇಕೆಂಬ ಆಶೆಯಿದೆ.

ಶ್ರೀ ಕೆ. ಪುಟ್ಟಸ್ವಾಮಿ.—ಈ ಕೆಲಸ ಎಷ್ಟುದಿನ ನಡೆದಿದೆ, ಪ್ರಾರಂಭವಾದದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್. ಈ ಸಂಬಂಧವಾಗಿ ಖೋತಾ ನಿರ್ಣಯ ಚರ್ಚೆಗೆ ಬಂದಾಗ ಜವಾಬು ಹೇಳಿದ್ದೇನೆ, ಅದರಲ್ಲಿ ಎಲ್ಲಾ ವಿವರಗಳನ್ನೂ ಕೊಟ್ಟಿದ್ದೇನೆ.

Construction of a bridge across the Kodihalla of Haralahalli Tank, Krishnarajapet Taluk.

Q.—500. Sri S. M. LINGAPPA (Krishnarajpet).—Will the Government be pleased to state :—

(a) whether they have received any petitions from the raiyats of the locality requesting for the construction of a bridge across the Kodihalla of Haralahalli Tank in Silanere Hobli of Krishnarajapet Taluk ;

(b) the steps undertaken by Government in this behalf ?

A.—Sri Kadidal MANJAPPA (Minister for Revenue and Public Works).—

(a) Yes.

(b) the proposal is under consideration.

ಶ್ರೀ ಎಸ್. ಎಂ. ಲಿಂಗಪ್ಪ.—ಇದು ಆಗಬೇಕೆಂದು ಆ ಗ್ರಾಮಗಳ ರೈತರು ಎಷ್ಟು ವರ್ಷಗಳಿಂದ ವಿನಂತಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ವರ್ಷಗಳಿಂದ.

ಶ್ರೀ ಎಸ್. ಎಂ. ಲಿಂಗಪ್ಪ.—ನಿಮಾರು ಎಷ್ಟು ವರ್ಷಗಳಿಂದ ಎಂದಿಟ್ಟುಕೊಳ್ಳಬಹುದು ?

Mr. SPEAKER.—Any other question ?

(No response)

Construction of kattu-kaluve to Srinivasa Sagar, Chikballapur Taluk.

Q.—511. Sri G. PAPANNA (Sidlaghatta-Chikballapur).—Will the Government be pleased to state:—

(*a*) whether any representations have been received by them praying for the construction of a 'kattu-kaluve' to facilitate the water from the wasteweir of Srinivasa Sagar, Chikballapur Taluk, to flow into some of the tanks of Darinaikanapalya and Nagaragere Hoblis of Goribidanur Taluk ;

(*b*) if so, whether any survey has been conducted in that respect ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) Yes.

ಶ್ರೀ ಜಿ. ಪಾಪಣ್ಣ.—ಇದಕ್ಕೆ ಸರ್ವೆ ನಡೆಸಿದ್ದು ಯಾವಾಗ ?

ಶ್ರೀ ಕಡಿದಾಳ್ ಮಂಜಪ್ಪ.—ತಾರೀಖು, ವರ್ಷ ಗೊತ್ತಿಲ್ಲ. ಈ ಕೆಲಸವನ್ನು ತೆಗೆದುಕೊಳ್ಳುವುದು ಪ್ರಯೋಜನವಿಲ್ಲವೆಂದು ನಮ್ಮ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ಜಿ. ಪಾಪಣ್ಣ.—ಕಾರಣವೇನು ?

Sri Kadidal MANJAPPA.—On the ground that there is no surplus water.

ಶ್ರೀ ಜಿ. ಪಾಪಣ್ಣ.—ಈ ಕೋಡಿಯ ನೀರೆಲ್ಲಾ ಮದರಾಸು ಪ್ರಾಂತ್ಯಕ್ಕೆ ಹೋಗುತ್ತಿದೆಯೆಂಬುದು ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.